1

# ಜಲಪ್ರಳಯಕ್ಕಿಂತ ಮೊದಲಿನ ಕಾಲಾವಧಿ

## ಸೃಷ್ಟಿಯಿಂದ ಜಲಪ್ರಳಯದ ವರೆಗೆ

## ಕ್ರಿ.ಪೂ. 4004-2348 (ಆದಿಕಾಂಡ 1:1-8:13)

**ಪೀಠಿಕೆ: ಆದಿಕಾಂಡ ಗ್ರಂಥ.**-ಆದಿಕಾಂಡವು (ಸಂತತಿ, ಪ್ರಾರಂಭ) "ಆರಂಭಗಳ ಪುಸ್ತಕ" ವಾಗಿದೆ. ಆದಿಕಾಂಡ 1:1 ಎಲ್ಲಾ ಸಂಗತಿಗಳ ಉತ್ಪತ್ತಿಯನ್ನು ಕೊಡುತ್ತದೆ, "ವಂಶಜರು ..." ಎಂಬ ಮಾತು ಈ ಕೆಳಗಿನಂತೆ ಹತ್ತು ಸಲ ಬರುತ್ತದೆ: "ಭೂಮ್ಯಾಕಾಶಗಳ ವಂಶಗಳು," ಆದಿಕಾಂಡ 2:4; "ಆದಾಮನ," 5:1; "ನೋಹನ," 6:9; "ನೋಹನ ಮಕ್ಕಳ," 10:1; "ಶೇಮನ," 11:10; "ತೆರಹನ," 11:27; "ಇಷ್ಮಾಯೇಲನ," 25:12; "ಇಸಾಕನ," 25:19; "ಏಸಾವನ," 36:1; "ಯಾಕೋಬನ," 37:2. ಈ ಸೂತ್ರವು ಪುನಃ ಪುನಃ ಉಪಯೋಗಿಸಲ್ಪಟ್ಟದ್ದು ಒಂದು ಆಕಸ್ಮಿಕವಲ್ಲ. ಗ್ರಂಥಕರ್ತನು ಚರಿತ್ರೆಯ ಪ್ರಾರಂಭಗಳೊಂದಿಗೆ ಮನಃ ಪೂರ್ವಕವಾಗಿ ವ್ಯವಹರಿಸುತ್ತಿದ್ದಾನೆ. ಬೈಬಲಿನ ಪ್ರಥಮ ಪುಸ್ತಕ ವಿಶೇಷ ಗುಣಲಕ್ಷಣವು ಮೊದಲೇ ಗಮನ ಸೆಳೆದಿದೆ, ಮತ್ತು ಅದು ಯೋಗ್ಯವಾಗಿ "ಆದಿಕಾಂಡ" ಎಂದು ಕರೆಯಲ್ಪಟ್ಟಿದೆ.

**1. ವಿಶ್ವದ ಪ್ರಾರಂಭ** (ಆದಿಕಾಂಡ 1:1).-*a. ಸಮಸ್ಯೆಯು ಉದಾಹರಿಸಲ್ಪಟ್ಟಿದೆ.*-ಸ್ಟೀಲಿನ ಒಂದು ತುಂಡು ಕೊಡಲ್ಪಡುವಾಗ, ಅದರಿಂದ ನಾವು ಸುತ್ತಿಗೆಗಳನ್ನು, ಕತ್ತರಿಗಳನ್ನು, ಸೂಜಿಗಳನ್ನು, ವಾಚಿನ ಸ್ಪ್ರಿಂಗುಗಳನ್ನು, ಇತ್ಯಾದಿಗಳನ್ನು ಮಾಡಬಹುದು. ಅದು ಸೃಷ್ಟಿಯಾಗಿರುವುದಿಲ್ಲ; ಅದು ರೂಪಾಂತರಿಸುವುದಾಗಿದೆ. ಸ್ಟೀಲ್ ಎಲ್ಲಿಂದ? ಅದನ್ನು ಯಾರು ಮಾಡಿದರು? ಇಲ್ಲಿ ವಿಶ್ವವಿದೆ; ಸೂರ್ಯ. ನಕ್ಷತ್ರಗಳು, ಸಾಗರಗಳು, ವಿವಿಧ ಜೀವಿಗಳು ಇವೆ. ಕೆಳಗಿನ ಪ್ರಶ್ನೆಯು ರೂಪಾಂತರಗಳಲ್ಲಿ ಒಂದಾಗಿರುವುದಿಲ್ಲ, ಆದರೆ ಮೂಲದ್ದಾಗಿರುತ್ತದೆ.

*b. ಸಮಸ್ಯೆಯು ಪರಿಹರಿಸಲ್ಪಟ್ಟಿತು.*-ಯುಗಗಳಿಂದ ವಿವೇಚನೆಯು ಸಮಸ್ಯೆಯ ಕಡೆಗೆ ಕಾರ್ಯಮಾಡಿತು.[1] "ನಿತ್ಯವಾದ"; "ಸ್ವಯಂ - ಕೃತ", "ದೈವಯೋಗ"; ಇಂಥವುಗಳು ಕೊಡಲ್ಪಟ್ಟ ಕೆಲವು ಪರಿಹಾರಗಳಾಗಿವೆ. ಇತರ ಪರಿಹಾರಗಳು ಬಹಳವಾದ ಬಹುದೇವತಾರಾಧನೆಯಲ್ಲಿ ಮರೆಯಾಗಿ ಹೋಗಿವೆ. ಅಭಿಪ್ರಾಯಗಳ ಈ ಬಾಬೆಲಿನ ಮಧ್ಯದಲ್ಲಿ, ನಮ್ಮ ಗ್ರಂಥಕರ್ತನು ಅವಕಾಶವಿಲ್ಲದಿರುವುದನ್ನು ಸ್ಪಷ್ಟವಾಗಿ ನೋಡುತ್ತಾನೆ; ಯಾವುದೂ ಸ್ವಯಂಕೃತವಾದದ್ದಲ್ಲ; ಪ್ರತಿಯೊಂದು ಪರಿಣಾಮಕ್ಕೆ ತಕ್ಕಷ್ಟು ಕಾರಣವಿರಬೇಕು. ಆತನ ಪ್ರೇರಿತ ಪೆನ್ನಿನ ಒಂದು ಮಾತು ಸಮಸ್ಯೆಯನ್ನು ಬಗೆಹರಿಸುತ್ತದೆ; "ಆದಿಯಲ್ಲಿ **ದೇವರು** ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದನು."[2] **ದೇವರು** ಪರಿಹಾರವಾಗಿದ್ದಾನೆ. ದೇವರಿಗೆ ಕೊಡಲ್ಪಟ್ಟರೆ, ಎಲ್ಲವೂ ಹಿಂಬಾಲಿಸುವುದು. "ಆತನು ನುಡಿದ ಮಾತ್ರಕ್ಕೆ ಸಮಸ್ತವೂ ಉಂಟಾಯಿತು; ಆತನು ಆಜ್ಞಾಪಿಸುತ್ತಲೇ ಸರ್ವವೂ ಸ್ಥಾಪನೆಯಾಯಿತು" (ಕೀರ್ತನೆ 33:9).

*c. ಸಮಯ.*-"ಆದಿಯಲ್ಲಿ." ವಿಜ್ಞಾನವು ಮಿಲಿಯನ್‌ಗಟ್ಟಲೆ ವರ್ಷಗಳ ಬಗ್ಗೆ ಬುದ್ಧಿವಂತಿಕೆಯಿಂದ ಮಾತಾಡುತ್ತದೆ. ಆದಿಕಾಂಡವು "ಆದಿಯಲ್ಲಿ" ಎಂದಷ್ಟೇ ಹೇಳುತ್ತದೆ.

**2. ಕ್ರಮದ ಪ್ರಾರಂಭ** (ಆದಿಕಾಂಡ 1:2-2:3).-ಸೃಷ್ಟಿಯ ದಾಖಲೆಯು *(a) ಆದಿಯ ಗಲಿಬಿಲಿಯ ಬಗ್ಗೆ,* "ಕ್ರಮವಿಲ್ಲದೆಯೂ ಬರಿದಾಗಿಯೂ" ಇರುವುದಕ್ಕೆ; *(b) ಸಂಘಟಿಸುವ ಶಕ್ತಿಯನ್ನು;* "ದೇವರಾತ್ಮವು ಜಲಸಮೂಹಗಳ ಮೇಲೆ ಚಲಿಸುತ್ತಿತ್ತು"[3]; ಎಂಬುದನ್ನು, *(c) ಒಂದರ ನಂತರ ಒಂದರಂತೆ ಆರು ದಿನಗಳನ್ನು ಸೂಚಿಸುತ್ತದೆ.* (1) ಬೆಳಕಿನ ಪ್ರಾರಂಭ. ಲ್ಯಾಪಲೇಸನು ನೆಬುಲ ಹೈಪೊತೆಸಿಸಿನ ಕರ್ತೃವಾಗಿದ್ದನು ಅದು ಪ್ರಾರಂಭವನ್ನು ಎತ್ತಿಹಿಡುವುದಕ್ಕಾಗಿ ಅಲ್ಲ, ಆದರೆ ವಿಶ್ವಕ್ಕಾಗಿ ಲೆಕ್ಕಾಚಾರ ಮಾಡುವುದಕ್ಕಾಗಿ ಮುಂದುವರಿಸಲ್ಪಟ್ಟಿತು. ಆ ತತ್ವದ ಪ್ರಕಾರವಾಗಿ, ಗಾಳಿಯಂಥ ಭೌತವಸ್ತುವು ಘನೀಭವಿಸಲ್ಪಟ್ಟಿದ್ದು, ಅತಿಶಯವಾದ ಬಿಸಿಯನ್ನು ಉಕ್ಕಿಸುವ ಬೆಳಕಿನಿಂದ ಹಿಂಬಾಲಿಸಲ್ಪಟ್ಟಿತು. ಸೂರ್ಯನ ಮುಂದೆ ಬೆಳಕನ್ನು ಇಟ್ಟದ್ದಕ್ಕಾಗಿ ಜನರು ಮೋಶೆಯನ್ನು ಮೂರ್ಖನೆಂದು ಕರೆಯುತ್ತಾರೆ ಮತ್ತು ವಿಜ್ಞಾನಿಯಾದ ಲ್ಯಾಪಲೇಸನು ಅದೇ ಸಂಗತಿಯನ್ನು ಮಾಡಿದ್ದಕ್ಕಾಗಿ ಹಾಗೆ ಕರೆಯಲ್ಪಟ್ಟನು. (2) ಮೇಘಮಂಡಲದ ಇಲ್ಲವೇ ವಿಸ್ತಾರದ ಪ್ರಾರಂಭ - ಭೂಪೃಷ್ಠವು ತಣ್ಣಗಾಯಿತು; ದಟ್ಟವಾದ ಹೊಗೆಯು ಘನೀಕರಿಸಲ್ಪಟ್ಟು ಮಳೆಯಂತೆ ಬಿದ್ದೀತು ಇಲ್ಲವೇ ಮೋಡಗಳಂತೆ ಮೇಲೇರಿತು, ಮತ್ತು ಆಕಾಶದ ವಿಸ್ತಾರವು ಮಿತಿಯಿಲ್ಲದ ಮೇಲಿನ ನೀಲಿಬಣ್ಣದ ಡೇರೆಯಂತೆ ಗೋಚರವಾಯಿತು. (3) ಭೂಖಂಡಗಳ, ಸಮುದ್ರಗಳ ಮತ್ತು ಸಸ್ಯಗಳ ಪ್ರಾರಂಭ. ಭೂಖಂಡಗಳು, ನಡುಗಡ್ಡೆಗಳು, ಸಮುದ್ರತೀರವು ಇಲ್ಲದ ವಿಶ್ವಸಾಗರವಿದ್ದ ಸಮಯವಿತ್ತೆಂದು ತೋರುತ್ತದೆ. ದೇವರು ಮಾತಾಡುತ್ತಾನೆ; ಸಮುದ್ರ ತಳಗಳಿಂದ ಭೂಖಂಡಗಳು ಏಳುತ್ತವೆ; ನಡುಗಡ್ಡೆಗಳು ಸಾಗರಗಳಲ್ಲಿ ಬೆಳೆಯುತ್ತವೆ; ಮೊದಲು ಏನೂ ಇಲ್ಲದೇ ಬರಿದಾದವುಗಳಾಗಿರುತ್ತವೆ ಅನಂತರ ವಿವಿಧ ಸಸ್ಯಗಳಿಂದ ಹೊದಿಸಲ್ಪಡುತ್ತವೆ. (4) ಸೂರ್ಯ, ಚಂದ್ರ ಮತ್ತು ನಕ್ಷತ್ರಗಳ ಪ್ರಾರಂಭ. ಸೃಷ್ಟಿಯ ದಾಖಲೆಯು "ಚಮತ್ಕಾರದಂತೆ" ಇಲ್ಲವೇ "ವಿಹಂಗಮ ನೋಟದಂತೆ" ಕಲ್ಪಿಸಿಕೊಳ್ಳಲ್ಪಡಬಹುದು. ಅಂದರೆ ಭೂಲೋಕದಿಂದ ನೋಡುವವನಿಗೆ ಕಾಣುವಂತೆ ಅವು ಘಟನೆಗೆಳನ್ನು ವಿವರಿಸುವಂತೆ - ಕಾಣಬಹುದು. ಆಕಾಶದ ವಸ್ತುಗಳು ನಾಲ್ಕನೆಯ ದಿನಕ್ಕಿಂತ ಮೊದಲು ಅಸ್ತಿತ್ವದಲ್ಲಿದ್ದದ್ದು ಸಂಶಯವಿಲ್ಲದ್ದಾಗಿದೆ; ಆದರೆ ಆಗ ಮೊದಲನೆಯದು ಭೂಲೋಕಕ್ಕೆ ಕಾಣುವಂಥದ್ದಾಯಿತು. (5) ಜಲಚರಗಳ ಮತ್ತು ಪಕ್ಷಿಗಳ ಪ್ರಾರಂಭ. ಜೀವನ ರೇಖೆಯು ದಾಟಲ್ಪಟ್ಟಿತು. ಇಲ್ಲಿಯವರೆಗೆ ಭೂಮಿಯ ಮೇಲೆ ಯಾವ ಮೃಗವೂ ನಡೆದಾಡಿರಲಿಲ್ಲ. ಯಾವ ಪಕ್ಷಿಯೂ ಗಾಳಿಯಲ್ಲಿ ಹಾರಾಡಿರಲಿಲ್ಲ, ಯಾವ ಮೀನೂ ಸಮುದ್ರದಲ್ಲಿ ಈಜಾಡಿರಲಿಲ್ಲ. ಮತ್ತೊಮ್ಮೆ ದೈವಿಕ ಆಜ್ಞೆಕೊಡಲ್ಪಡುತ್ತದೆ, ಮತ್ತು ಗಾಳಿ ಮತ್ತು ಸಮುದ್ರಗಳು ಜೀವಿಗಳಿಂದ ತುಂಬಿಕೊಳ್ಳುತ್ತವೆ ಇದು ಮೃದು ಶರೀರಗಳ ಮತ್ತು ಉರಗಗಳ, ಪಕ್ಷಿಗಳ ಮತ್ತು ಮೀನುಗಳ ಯುಗವಾಗಿತ್ತು. (6) ಭೂಮಿ - ಜೀವಿಗಳ ಮತ್ತು ಮನುಷ್ಯನ ಪ್ರಾರಂಭ. ಆರನೆಯ ದಿನದ ವಿಶೇಷ ಗುಣಲಕ್ಷಣವು ಮನುಷ್ಯನು; ಮನುಷ್ಯನ ವಿಶೇಷ ಗುಣಲಕ್ಷಣವು ಅವನು ದೇವರ ಸ್ವರೂಪದಲ್ಲಿ ಇರುವಂಥದ್ದಾಗಿದೆ (ಆದಿಕಾಂಡ 1:27). "ಉಂಟುಮಾಡು" ಎಂಬುದು ಈ ಅಧ್ಯಾಯದಲ್ಲಿ ಮೂರು ಸಲ ಉಪಯೋಗಿಸಲ್ಪಟ್ಟಿದೆ: 1:1ರಲ್ಲಿ ವಿಶ್ವದ ಬಗ್ಗೆ; 1:21ರಲ್ಲಿ ಪ್ರಾಣಿ ಜೀವದ ಪ್ರಾರಂಭದಲ್ಲಿ; 1:27ರಲ್ಲಿ ಮನುಷ್ಯನ ಉತ್ಪತ್ತಿಯ ಬಗ್ಗೆ ಉಪಯೋಗಿಸಲ್ಪಟ್ಟಿದೆ. ಮೊದಲನೆಯದು ಇಲ್ಲದಿರುವುದರ ಮತ್ತು ಇರುವುದರ ಮಧ್ಯದಲ್ಲಿಯ ಗೆರೆಯನ್ನು ದಾಟುತ್ತದೆ, ಎರಡನೆಯದು ಜೀವಿಸದಿರುವ ಮತ್ತು ಜೀವಿಸುತ್ತಿರುವುದರ ಮಧ್ಯದಲ್ಲಿಯ ಗೆರೆಯನ್ನು ದಾಟುತ್ತದೆ ಹಾಗೂ ಮೂರನೆಯದು ಮೃಗದ ಮತ್ತು ಮನುಷ್ಯನ ಮಧ್ಯದಲ್ಲಿಯ ಗೆರೆಯನ್ನು ದಾಟುತ್ತದೆ. ತನ್ನ ಕೆಳಗಿನ ಪಕ್ಕದಲ್ಲಿ ಮನುಷ್ಯನು ತಾನು ಹಿಂದಿರುಗಿ ಹೋಗುವ

ಮಣ್ಣಿನ ರೂಪಕದಲ್ಲಿದ್ದಾನೆ, ಸಸ್ಯ ಜೀವವು ತನ್ನ ಮಣ್ಣಿನಲ್ಲಿ ಬೇರು ಬಿಡುತ್ತದೆ, ಮತ್ತು ಮೃಗವು ಅದರ ಮಣ್ಣಿನ ಮೇಲೆ ಅಲೆದಾಡುತ್ತದೆ. ಆದರೆ ಅವನು ಅವು ಮಾಡದಂತೆ ಮೇಲ್ಗಡೆಗೆ ನೋಡುತ್ತಾನೆ. ಅವನು (i.) ಬುದ್ಧಿಯುಳ್ಳ ಗ್ರಹಿಕೆಯಲ್ಲಿ ದೇವರ ಸ್ವರೂಪದಲ್ಲಿ ಇರುತ್ತಾನೆ. ಮನುಷ್ಯನಿಗಿಂತ ಮೊದಲು ಕ್ರಮವೂ ಸೌಂದರ್ಯವೂ ಇದ್ದವು; ಆದರೆ ಕ್ರಮವನ್ನೂ ಇಲ್ಲವೇ ಸೌಂದರ್ಯವನ್ನೂ ಮೆಚ್ಚಿಕೊಳ್ಳಲು ಇಲ್ಲವೇ ಕಾರಣವನ್ನೂ ಪರಿಣಾಮವನ್ನೂ ಸಂಬಂಧಿಸಲು ಭೂಮಿಯ ಮೇಲೆ ಯಾವ ಜೀವಿಯೂ ಇರಲಿಲ್ಲ. ದೇವರು ಮಾತ್ರವೇ ಸೃಷ್ಟಿಸ ಬಲ್ಲನು; ಮಾನವನು ಮಾತ್ರವೇ, ದೇವರ ಸ್ವರೂಪದಲ್ಲಿ, ದೇವರ ಸೃಷ್ಟಿಯಲ್ಲಿ ಯೋಜನೆಯನ್ನೂ ಸೌಂದರ್ಯವನ್ನೂ ಗ್ರಹಿಸಬಲ್ಲನು. (ii.) ತಿಳುವಳಿಕೆಯಲ್ಲಿ, ಜ್ಞಾನದಲ್ಲಿ, ಯೋಗ್ಯವಾದ ಮನೋಭಾವನೆ. (iii.) ಜ್ಞಾನದ ಆಯ್ಕೆಯ ಬಲದಲ್ಲಿ. (iv.) ನೈತಿಕ ಸ್ವಭಾವದಲ್ಲಿ, ಸರಿಯಾದದ್ದರ ಮತ್ತು ತಪ್ಪಾದದ್ದರ ಭಾವನೆ. (v.) ಆಳ್ವಿಕೆಯಲ್ಲಿ."ಅವನು ದೊರೆತನ ಮಾಡಲಿ."[4] ಎಂಬುದು ಅವನ "ವಲಸೆಹೋದವನ ಗುಣಲಕ್ಷಣವಾಗಿದೆ." ಅದು ಅವನಿಗೆ ಭೂಲೋಕ ಮತ್ತು ಅದರ ಎಲ್ಲಾ ಉತ್ಪನ್ನಗಳಿಗೆ ಅವನ ಹಕ್ಕನ್ನು ಕೊಡುತ್ತದೆ. ಅದು ಪ್ರಾಪಂಚಿಕ ಸೃಷ್ಟಿಯನ್ನು ಅದು ನೈತಿಕ ಅರ್ಥದಿಂದ ಹೊದಿಸುತ್ತದೆ: ಅದರ ಅಂತ್ಯವು ಮನುಷ್ಯನು, ಅದರ ಅತೀ ಶ್ರೇಷ್ಠ ಅಂತ್ಯವು ದೇವರಾಗಿದ್ದಾನೆ.

ಸೃಜನಾತ್ಮಕ ದಾಖಲೆಯ ಒಂದು ಇಲ್ಲವೇ ಎರಡು ಲಕ್ಷಣಗಳು ವಿಶೇಷ ಗಮನಿಸುವಿಕೆಗೆ ಯೋಗ್ಯವಾದವುಗಳಾಗಿವೆ. (1) ಅದರ ವಿಶೇಷವಾದ ಸಾಮರಸ್ಯವು ವಿಜ್ಞಾನದ ಸ್ಥಾಪಿತ ಪರಿಣಾಮಗಳೊಂದಿರುವುದು; ಅದರಲ್ಲಿ ಪ್ರಾರಂಭವು ಇತ್ತು; ಆ ಕ್ರಮವಿಲ್ಲದಿರುವಿಕೆಯು ಕ್ರಮವನ್ನು ಹಿಂಬಾಲಿಸಿತು; ಆ ಸೃಷ್ಟಿಯು ಒಂದೇ ಸಮಯದಲ್ಲಿ ಆದದ್ದಲ್ಲ, ಆದರೆ ಒಂದರ ನಂತರ ಒಂದು ಆದದ್ದು; ಅದು ಪ್ರಗತಿಪರ ಬೆಳವಣಿಗೆಯಿಂದ ಹಿಂಬಾಲಿಸಲ್ಪಟ್ಟಿತು; ಆ ಪ್ರಗತಿಯೂ ಕೆಳಗಿನಿಂದ ಎತ್ತರಕ್ಕೆ ಆಯಿತು; ಮತ್ತು ಅಂತಿಮವಾಗಿ, ಸಾಮಾನ್ಯವಾದ ಒಪ್ಪಂದದಲ್ಲಿ, ಒಂದರ ನಂತರ ಒಂದರಂತೆ ಸೃಷ್ಟಿಗಳ ಕ್ರಮದಂತೆ ಆಯಿತು. ಆದಿಕಾಂಡದ ಮೊದಲನೆಯ ಅಧ್ಯಾಯವು ಕಲ್ಪನಾಕಾರ್ಯವಾಗಿರುವುದೋ? ಡಾರ್ವಿನ್ ಇಲ್ಲವೇ ಟಿಂಡಾಲ್, ಇಲ್ಲವೇ ಹಕ್ಸಲೇಯವರು, ಅವೈಜ್ಞಾನಿಕ ಯುಗದಲ್ಲಿ ಅಷ್ಟು ಚೆನ್ನಾಗಿ ಊಹಿಸಿದರೋ? (2) ಅದು ಖಂಡಿತವಾದ ಇತಿಹಾಸವಲ್ಲ. ಇತಿಹಾಸವು ಮಾಹಿತಿಯ ಮಾನವ ಮೂಲಗಳನ್ನು ಉಪಯೋಗಿಸುತ್ತದೆ; ಮೌಖಿಕ ಸಾಂಪ್ರದಾಯ, ಲಿಖಿತ ನಿಯಮಗಳು ಮತ್ತು ದಾಖಲೆಗಳು, ಪುರಾತನ ಸ್ಮಾರಕಗಳು. ಯಾವುದೇ ಸಾಂಪ್ರದಾಯವು ಭೂಮಿಯ ಮೇಲೆ ಮನುಷ್ಯನ ಕಾಣಿಸಿಕೊಳ್ಳುವಿಕೆಯನ್ನು ಹಿಂದೆಹೋಗಿ ತಲುಪಲಾರದು. ಅದು ಒಂದು ಅಪೊಕಾಲಿಪ್ಸ್ ಆಗಿರಬಹುದು, ಒಂದು ದೈವಿಕ ಪ್ರಕಟಣೆಯಾಗಿರಬಹುದು, ಹೀಗೆ ಬೈಬಲು ತೆರೆಯುತ್ತದೆ, ಹಾಗೆ ಅದು ಮುಚ್ಚಿಕೊಳ್ಳುತ್ತದೆ. ತಿಳಿಯದ ಹಿಂದಿನಕಾಲ ಮತ್ತು ತಿಳಿಯದ ಭವಿಷ್ಯವು, ಬೈಬಲನ್ನು ತೆರೆಯುವ ಮತ್ತು ಮುಚ್ಚುವ ದರ್ಶನಗಳಲ್ಲಿ ಪ್ರಕಟಿಸಲ್ಪಟ್ಟು ನಿಲ್ಲುತ್ತದೆ.

**3. ಪಾಪದ ಪ್ರಾರಂಭ** (ಆದಿಕಾಂಡ 2:4-3:24).-ಆದಿಕಾಂಡ 1:1-2:3, ಸೃಷ್ಟಿಯ ಸಾಮಾನ್ಯ ವಿವರವನ್ನು ಕೊಡುತ್ತದೆ. ಈ ವಿಭಾಗವು ಮನುಷ್ಯನ ಬಗ್ಗೆ ಹೆಚ್ಚು ಪ್ರತ್ಯೇಕವಾದ ವಿವರಣೆಯೊಂದಿಗೆ ಪುನರಾವರ್ತನೆ ಮಾಡುತ್ತದೆ. ಮೊದಲನೆಯ ಭಾಗದಲ್ಲಿ ಮನುಷ್ಯನನ್ನು ಒಳಗೊಂಡು ನಿಸರ್ಗವು ಮುಖ್ಯ ಪ್ರಸ್ತಾಪವಾಗಿದೆ. ಎಲ್ಲಾ ಸೃಷ್ಟಿಯು ತನ್ನ ಅನಂತತ್ವ, ಬುದ್ಧಿವಂತಿಕೆಯ ಮೂಲದಂತೆ ದೇವರ ಕಡೆಗೆ ಗುರುತಿಸಲ್ಪಟ್ಟಿದೆ. ಎರಡನೆಯ ಭಾಗದಲ್ಲಿ ಮನುಷ್ಯನು ದೊಡ್ಡ ಮುಖ್ಯ ಪ್ರಸ್ತಾಪವಾಗಿದ್ದಾನೆ, ಆತನು ಇಲ್ಲಿ ತನ್ನ ನಿಜವಾದ ಸಂಬಂಧದಲ್ಲಿ ಸೃಷ್ಟಿಯ ಕಿರೀಟದಂತೆ ಮತ್ತು ಯಜಮಾನನಂತೆ

ಇಡಲ್ಪಟ್ಟಿದ್ದಾನೆ, ಯಾಕೆಂದರೆ ಅವನು ತನ್ನ ಸೃಷ್ಟಿಕರ್ತನ ಸ್ವರೂಪದಲ್ಲಿದ್ದಾನೆ.

*a. ಅನಾದಿಕಾಲದ ಸ್ಥಿತಿ.*-ಇಲ್ಲಿ ನಾವು ನಿಜವಾದ ಇತಿಹಾಸದೊಳಗೆ ಪ್ರವೇಶಿಸುತ್ತೇವೆ. ಪ್ರಕಟನೆಯು ಜ್ಞಾನದ ಮಾನವ ಮೂಲಗಳನ್ನು ಉಪಯೋಗಿಸಬಹುದು. ನಮ್ಮ ಅನಾದಿ ಕಾಲದ ಸ್ಥಾನದ ಜ್ಞಾನವು (1) ಮಾನವನ ವಾಸಸ್ಥಾನಕ್ಕೆ ವಿಸ್ತರಿಸಲ್ಪಟ್ಟಿರುವುದು. ಇದು ಏದೆನ್ ಆಗಿತ್ತು. ಎರಡು ಪ್ರಸಿದ್ಧ ನದಿಗಳು, ಯೂಫ್ರೇಟೀಸ್ ಮತ್ತ ಹಿದ್ದೆಕೆಲ್ (ಟೈಗ್ರಿಸ್) ನೈರುತ್ಯ ಸೌತ್ ವೆಸ್ಟ್ಟರ್ನ್ ಏಶಿಯಾದ ಕಡೆಗೆ ತೋರಿಸುತ್ತದೆ. ವಿಶಾಲವಾಗಿ ಹಬ್ಬಿದ ಸಾಂಪ್ರಾದಾಯವು ಆಧುನಿಕ ವೈಜ್ಞಾನಿಕ ಸಂಶೋಧನೆಯಿಂದ ದೃಢಪಡಿಸಲ್ಪಟ್ಟದ್ದು, ಕೌಕೇಶಿಯಾದ ದಕ್ಷಿಣದ ಉನ್ನತ ಪ್ರದೇಶಗಳ ಕಡೆಗೆ ಜನಾಂಗದ ತೊಟ್ಟಿಲದಂತೆ ತೋರಿಸುತ್ತದೆ. (2) ಸಮಾಜ. ಮನುಷ್ಯನು ಏಕಾಂತಕ್ಕಾಗಿ ಮಾಡಲ್ಪಡಲಿಲ್ಲ ಇಲ್ಲವೇ ಪಶುಪ್ರಾಯ ಜೀವನದ ಉನ್ನತ ರೂಪಗಳೊಂದಿಗೆ ಯಾವುದೇ ನಿಜವಾದ ಜೊತೆಗಾರಿಕೆಯನ್ನು ಕಂಡುಕೊಳ್ಳುವದಕ್ಕಾಗಿಯೂ ಮಾಡಲ್ಪಡಲಿಲ್ಲ. ಕೇವಲ ತನ್ನ ಸ್ವಂತ ಜಾತಿಯೊಂದಿಗೆ ಮತ್ತು ಕುಟುಂಬ ಜೀವನದಲ್ಲಿ ತನ್ನ ಜೀವಿತದ ಉನ್ನತ ಅಂತ್ಯಗಳನ್ನು ಹೊಂದಿಕೊಳ್ಳಬೇಕು. ಹವ್ವಳ ಸೃಷ್ಟಿಸುವಿಕೆಯು ಜನಾಂಗದ ಅಗತ್ಯವಾದ ಐಕ್ಯತೆಯನ್ನು ಮತ್ತು ಗುಣಮಟ್ಟವನ್ನು ಬೋಧಿಸುತ್ತದೆ. (3) ಉದ್ಯೋಗ. ಮನುಷ್ಯನು ಮೈಗಳ್ಳತನಕ್ಕಾಗಿ ಎಂದೂ ಉದ್ದೇಶಿಸಲ್ಪಟ್ಟಿರುವುದಿಲ್ಲ. ಮೈಗಳ್ಳತನದಲ್ಲಿ ಬಲಗಳು ತುಕ್ಕು ಹಿಡಿಯುತ್ತವೆ, ನೈತಿಕತೆಗಳು ನಾಶವಾಗಿ ಹೋಗುತ್ತವೆ. ಆದುದರಿಂದ ಅವನು ಸರಿಪಡಿಸಲು, ಸರಿಯಾಗಿಡಲು ತೋಟದಲ್ಲಿ ಇಡಲ್ಪಟ್ಟನು. (4) ನೈತಿಕ ಸ್ಥಿತಿ. ದೇವರೊಂದಿಗಿನ ಪೂರ್ಣ ಅನ್ಯೋನ್ಯತೆಯ ಸ್ಥಿತಿಯನ್ನು, ಪರಿಪೂರ್ಣ ಯಥಾರ್ಥತೆ ಹಾಗೂ ನಂಬಿಕೆಯ ಆಶೀರ್ವಾದವನ್ನು, ವಿಶಾಲವಾದ ಸ್ವಾತಂತ್ರ್ಯವನ್ನು ಚರಿತ್ರೆಗಾರನು ಚಿತ್ರಿಸುತ್ತಾನೆ; "ನೀನು ತೋಟದಲ್ಲಿರುವ ಎಲ್ಲಾ ಮರಗಳ ಹಣ್ಣುಗಳನ್ನು ಯಥೇಚ್ಛವಾಗಿ ತಿನ್ನಬಹುದು"[5]; ಒಂದೇ ಒಂದು ನಿರ್ಬಂಧ ಇತ್ತು; "ಒಳ್ಳೇದರ ಮತ್ತು ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು."[6] ಸ್ವಾತಂತ್ರ್ಯಕ್ಕೆ ಮಿತಿಗಳಿರತಕ್ಕದ್ದು. ಮನುಷ್ಯನು ನಿಯಮವನ್ನು ಗೌರವಿಸತಕ್ಕದ್ದು. ಹಾಗೂ ಹೆಚ್ಚಿನ ಒಳ್ಳೆಯದಕ್ಕಾಗಿ ಸ್ವಾರ್ಥದ ಅಪೇಕ್ಷೆಯನ್ನು ಅಧೀನಗೊಳಿಸಬೇಕು. ಭೂಲೋಕದ ಮೇಲೆ ದೊರೆತನವಿದ್ದರೂ, ಅವನು ದೇವರಿಗೆ ಅಧೀನನಾಗಿರತಕ್ಕದ್ದು.

*b. ಉಲ್ಲಂಘನೆ.*-ಈಗಾಗಲೇ, ಪಾಪವೂ ಮತ್ತು ಪಾಪಿಯೂ ವಿಶ್ವದಲ್ಲಿದ್ದಾರೆ. ಎರಡೂ ತಮ್ಮ ಮಾರ್ಗವನ್ನು ಏದೆನಿಗೆ ಕಂಡುಕೊಳ್ಳುತ್ತವೆ. ಸರ್ಪವು ಸಂಕೇತದಂತೆ ಇಲ್ಲವೇ ಸೈತಾನನ ಪ್ರತಿನಿಧಿಯಂತೆ ಕಾಣಿಸಿಕೊಳ್ಳುತ್ತದೆ (ಹೋಲಿಸು ಯೋಹಾನ 8:44; ಪ್ರಕಟನೆ 12:9; 20:2). ಶೋಧನೆಯ ಮತ್ತು ಪಾಪದ ಹಾದಿಯನ್ನು ಗಮನಿಸಿರಿ. ಕೊಂಚಕೊಂಚವಾಗಿ ಒಳಗೆ ನುಸುಳಿಕೊಳ್ಳುವ ಪ್ರಶ್ನೆಯಿದೆ: "ತೋಟದಲ್ಲಿರುವ ಮರದ ಹಣ್ಣುಗಳನ್ನು ನೀವು ತಿನ್ನಬಾರದೆಂದು ದೇವರು ಅಪ್ಪಣೆ ಕೊಟ್ಟಿರುವುದು ನಿಜವೋ?" ಆ ಮೇಲೆ ಸುಳ್ಳು ನಿಂದನೆಯ ಮಾತು: "ನೀವು ಹೇಗೂ ಸಾಯುವುದಿಲ್ಲ."[7] ಆಮೇಲೆ, ತ್ವರಿತದ ಪ್ರಗತಿಯಲ್ಲಿ, ದೇವರ ಮೇಲೆ ಅಪನಂಬಿಕೆ, ತಪ್ಪಾದ ಅಪೇಕ್ಷೆ, ತಪ್ಪಾದ ಆಯ್ಕೆ, ಬಹಿರಂಗವಾಗಿ ಅವಿಧೇಯತೆ ಹಿಂಬಾಲಿಸುತ್ತವೆ. ದೇವರ ಕಡೆಗೆ ಹಿಂದಿರುಗುವುದು ಇದೆಲ್ಲವನ್ನು ತಿರುವುಮುರುವು ಮಾಡುತ್ತದೆ; ಸತ್ಯದ ನಂಬಿಕೆ, ದೇವರಲ್ಲಿ ವಿಶ್ವಾಸ, ಸರಿಯಾದ ಅಪೇಕ್ಷೆ, ಸರಿಯಾದ ಆಯ್ಕೆ, ದೇವರ ಚಿತ್ತಕ್ಕೆ ಬಹಿರಂಗ ಸಮರ್ಪಣೆ.

*c. ಶಿಕ್ಷೆ.*-ನೈಸರ್ಗಿಕವಾಗಿ, *ಅಗತ್ಯವಾದ* ಪರಿಣಾಮವು, ಅಪರಾಧದ ಮತ್ತು ಪರಾಧೀನತೆಯ ಭಾವನೆ ಹಿಂಬಾಲಿಸುತ್ತವೆ! ಆದಾಮ ಮತ್ತು ಹವ್ವರು "ಅಡಗಿಕೊಂಡರು"[8] ನ್ಯಾಯಕರವಾದ ಶಿಕ್ಷೆಯು ಬಂದಿತು; ಸ್ತ್ರೀಯ ಮೇಲೆ, ಹೆಚ್ಚಾದ ದುಃಖದ ಸಂಗತಿಗಳು;

ಪುರುಷನ ಮೇಲೆ, ಹೆಚ್ಚಾದ ಶ್ರಮೆ; ಆದಾಗ್ಯೂ ಇಬ್ಬರಿಗೂ ಮಹತ್ವವುಳ್ಳ ನಿರೀಕ್ಷೆ, ಸರ್ಪನ ತಲೆಯನ್ನು ಜಜ್ಜುವ ಸಂತಾನದ ವಾಗ್ದಾನ. ಆದಿಕಾಂಡ 3:15ರಲ್ಲಿ ಕಳೆದು ಕೊಂಡ ಏದೆನಿನ ದ್ವಾರದ ಬಳಿಯಲ್ಲಿ, ಕ್ರಿಸ್ತನ ವಿಮೋಚನಾ ಕಾರ್ಯದ ಮೊದಲನೆಯ ಮೊಬ್ಬಾದ ಪ್ರವಾದನೆಯನ್ನು ಹಿಡಿಯುತ್ತೇವೆ.

**4. ಸೃಷ್ಟಿಯ ಮತ್ತು ಪತನದ ಪ್ರತಿಧ್ವನಿಗಳು.**-ಪುರಾತನ ಸಾಹಿತ್ಯಗಳು ಇಲ್ಲಿ ದಾಖಲೆಮಾಡಿದ ಮಹಾ ಘಟನೆಗಳ ಆಸಕ್ತಿಯುಳ್ಳ ಕುರುಹುಗಳನ್ನು ಒಳಗೊಂಡಿರುತ್ತವೆ.[9] ಆದರೆ ಅವು ಅನ್ಯ ಕಲ್ಪನೆಗಳಿಂದ ಕೆಡಿಸಲ್ಪಟ್ಟಿವೆ. ಮತ್ತು ಪ್ರೇರೇಪಣೆಯ ಶುದ್ಧ ದಾಖಲೆಗಿಂತ ಕೆಳಮಟ್ಟದಲ್ಲಿರುತ್ತೆ "ಪತನದ ಕಥೆಯು, ಸೃಷ್ಟಿಯ ಕಥೆಯಂತೆ ಜಗತ್ತಿನಲ್ಲಿ ಓಡಾಡಿದೆ, ಅನ್ಯ ಜನಾಂಗಗಳು ಅದನ್ನು ಬದಲಾವಣೆ ಮಾಡಿಕೊಂಡಿವೆ. ಮತ್ತು ತಮ್ಮ ಭೌಗೋಳಿಕದೊಂದಿಗೆ ತಮ್ಮ ಇತಿಹಾಸದೊಂದಿಗೆ, ತಮ್ಮ ದಂತ ಕಥೆಯೊಂದಿಗೆ ಮಿಶ್ರಣ ಮಾಡಿಕೊಂಡಿವೆ. ಆದಾಗ್ಯೂ ಅದನ್ನು ನೀವು ಗುರುತಿಸಲಾಗದಷ್ಟು ಅದು ಎಂದೂ ರೂಪವನ್ನೂ, ಬಣ್ಣವನ್ನೂ ಭಾವನೆಯನ್ನೂ ಎಂದೂ ಬದಲಾಯಿಸಿರುವುದಿಲ್ಲ. ಹೀಗಿದ್ದರೂ, ಇಲ್ಲಿ ಧರ್ಮಶಾಸ್ತ್ರದಲ್ಲಿ, ಜಾಗತಿಕ ಮಾನವ ಗುಣಲಕ್ಷಣವನ್ನು, ವಿಶ್ವವ್ಯಾಪಿ ಘಟನೆಯನ್ನು, ಮತ್ತು ಸೃಷ್ಟಿಯ ನರ ಳಾಟಗಳನ್ನು, ಯೇಸುಕ್ರಿಸ್ತನಲ್ಲಿರುವ ವಿಮೋಚನೆಯನ್ನು, ಮತ್ತು ಪ್ರತಿಯೊಬ್ಬ ಮನುಷ್ಯನು ತಮ್ಮ ವಿವರಣೆಯ ಅತಿದೊಡ್ಡ ಅಕ್ಷರಶಃ ಸತ್ಯಕ್ಕೆ ಅವರ ಸಾಕ್ಷಿಯಲ್ಲಿ ಯೋಚಿಸುವ ಹೃದಯವನ್ನು ಕಾದಿಟ್ಟು ಕೊಂಡಿರುತ್ತದೆ."[10]

**5. ಯಜ್ಞದ ಪ್ರಾರಂಭ** (ಆದಿಕಾಂಡ 4:1-15).-ಬೆಳಕನ್ನು ನೆರಳನ್ನು ಎರಡನ್ನೂ ತರುವುದರಿಂದ ಈ ಮೊದಲನೆಯ ಮಾನವ ಮನೆಗೆ ಮಕ್ಕಳು ಬಂದವು. ಸಹೋದ ರರು ಉದ್ಯೋಗದಲ್ಲಿ ಮತ್ತು ತಾವು ತಂದ ಯಜ್ಞಗಳಲ್ಲಿ ಭಿನ್ನತೆಯುಳ್ಳವರಾಗಿದ್ದರು. ಜನರು ತಮ್ಮಲ್ಲಿಯೇ ಆಳವಾದ ಭಿನ್ನತೆಯುಳ್ಳವರಾಗಿದ್ದರು. ಕಾಯಿನನು ಭೂಮಿಯನ್ನು ಉಳುವವನಾಗಿದ್ದನು, ಹೇಬೆಲನು ಕುರಿಕಾಯುವವನಾಗಿದ್ದನು. ಒಬ್ಬನು ಹೊಲದ ಪ್ರಥಮ ಫಲವನ್ನು ತಂದನು. ಅಂದರೆ ಕೃತಜ್ಞತಾ ಕಾಣಿಕೆಯನ್ನು ತಂದನು. ಇನ್ನೊಬ್ಬನು ಪ್ರಾಯಶ್ಚಿತ್ತ ಯಜ್ಞವಾಗಿ ಮಂದೆಯ ಚೊಚ್ಚಲು ಪಶುವನ್ನು ತಂದನು. ಕಾಯಿನನು ಅರ್ಪಣೆಯು ಎದೆನ್ನಿನಲ್ಲಿ ಆದಾಮ - ಹವ್ವರು ಯಥಾರ್ಥತೆಯಲ್ಲಿ ಅರ್ಪಿಸಬಹುದಾದ್ದರಂತಿತ್ತು. ಅದು ಪಾಪದ ಭಾವನೆಯನ್ನು, ಕ್ಷಮಾಪಣೆಗಾಗಿ ಪ್ರಾರ್ಥನೆಯನ್ನು ವ್ಯಕ್ತಪಡಿಸಲಿಲ್ಲ. ಹೀಗಿದ್ದರೂ, ಕಾಯಿನನು ತನ್ನ ಸಹೋದರ ಹೇಬೆಲಿನ ನಂಬಿಕೆಯ ಕೊರತೆಯುಳ್ಳವನಾಗಿದ್ದನು (ಇಬ್ರಿಯ 11:4). ಅವನ ಆತ್ಮವು ಹೇಬೆಲನೊಂದಿಗೆ ವ್ಯತಿರಿಕ್ತವಾಗಿ ಇಟ್ಟರೆ, ಅದು ಅವಿಶ್ವಾಸದ, ಸ್ವನೀತಿಯ, ಸ್ವಚಿತ್ತದ ಆತ್ಮವಾಗಿತ್ತು. ಅದು ಏದೆನ್‌ದ ದ್ವಾರದ ಬಳಿಯಲ್ಲಿಯ ಫರಿಸಾಯನ ಮತ್ತು ಸುಂಕದವನ ವಿಷಯವಿದ್ದಂತೆ ಇತ್ತು, ಕಾಯಿನನ ಮತ್ಸರದ ದ್ವೇಷವು ಅವನನ್ನು ಕೊಲೆಗೆ ದೂಡಿತು; ಹೇಬೆಲನ ನಿಷ್ಠೆಯು ಅವನನ್ನು ಹತಸಾಕ್ಷಿಯಾಗುವಂತೆ ಮಾಡಿತು; ಒಬ್ಬನು ರಕ್ತಸಿಕ್ತ ಜನರಸಾಲಿನಲ್ಲಿ ಮೊದಲನೆಯವನಾದನು; ಇನ್ನೊಬ್ಬನು, ದೇವರ ಶೂರರ ಬಲವಾದ ಯಾದಿಯಲ್ಲಿ ಮೊದಲನೆಯವನಾದನು.

**6. ಕಾಯಿನನ ವಂಶ** (ಆದಿಕಾಂಡ 4:16-26).-ಕಾಯಿನನಿಗೆ ಒಬ್ಬ ಗಂಡುಮಗನು, ಹನೋಕನು ಮತ್ತು ಹನೋಕ ಎಂಬ ಪಟ್ಟಣವನ್ನು ಕಟ್ಟಿದನು. ತಂದೆಯಂತೆ ಮಗನು ಕಾಯಿನನ ವಂಶಜರು ಸಾಹಸಿಗಳೂ ಭಕ್ತಿಹೀನರಾಗಿದ್ದರು, ಕಾಯಿನ, ಹನೋಕ, ಈರಾದ, ಮೆಹೂಯಾಯೇಲ, ಮೆತೂಷಾಯೇಲ, ಲೆಮೆಕ ಎಂಬವರು ವಂಶಜರಾಗಿದ್ದರು. ಪಕ್ಕದ ಸಂತತಿಗಳೂ ಇದ್ದುದರ ಬಗ್ಗೆ ಸಂಶಯವಿಲ್ಲ. ಇದು ಕೊಡಲ್ಪಟ್ಟಿರುವುದಕ್ಕೆ ಕಾರಣ ಅದರ ಅಂತ್ಯದಲ್ಲಿ ಲೆಮೆಕನು ನಿಲ್ಲುತ್ತಾನೆ. ಅವನ

ಕುಟುಂಬದಲ್ಲಿ ವಂಶದ ವಿಶೇಷ ಗುಣಲಕ್ಷಣವು ತುತ್ತತುದಿಗೇರುತ್ತದೆ. ಲೆಮೆಕನಿಗೆ ಇಬ್ಬರು ಹೆಂಡತಿಯರಿದ್ದರು, ಅವರಿಂದ ಮೂರು ಗಂಡುಮಕ್ಕಳು ಜನಿಸಿದರು: ಯೂಬಾಲನು ವಾದ್ಯಗಾರನು, ಯಾಬಾಲನು ದನಕರುಗಳನ್ನು ಸಾಕುವವನು; ಮತ್ತು ತೂಬಲ್ ಕಾಯಿನನು ಕಬ್ಬಿಣ - ತಾಮ್ರದ ಕೆಲಸದವನು. ಕಾಯಿನನ ಹಿಂಸೆಯು ಲೆಮೆಕನಲ್ಲಿ ಪುನರಾವರ್ತನೆ ಯಾಗುತ್ತದೆ. ಅದು ಅವನ "ಖಡ್ಗದ ಸಂಗೀತ"ದಲ್ಲಿ ತೋರಿಸಲ್ಪಟ್ಟಿದೆ:

> "ಆದಾ, ಚಿಲ್ಲಾ, ನನ್ನ ಮಾತಿಗೆ ಕಿವಿಗೊಡಿರಿ, ಲೆಮೆಕನ ಹೆಂಡತಿಯರೇ, ನಾನು ಹೇಳುವದನ್ನು ಕೇಳಿರಿ. ನನಗೆ ಗಾಯಮಾಡಿದ ಒಬ್ಬ ಮನುಷ್ಯನನ್ನು ಕೊಂದೆನು; ನನ್ನನ್ನು ಹೊಡೆದ ಒಬ್ಬ ಪ್ರಾಯಸ್ಥನನ್ನು ಹತ ಮಾಡಿದೆನು" (ಆದಿಕಾಂಡ 4:23).

ಸಂಕ್ಷಿಪ್ತ ದಾಖಲೆಯಿಂದ ಎರಡು ಪಾಠಗಳು ಹೆಕ್ಕಿ ತೆಗೆಯಲ್ಪಡಬಹುದು: (1) ಭೌತಿಕ ನಾಗರಿಕತೆಯು ದೈವಿಕ ವರವಾಗಿರುವುದಿಲ್ಲ, ಆದರೆ ಕೇವಲ ಮಾನವ ಬೆಳವಣಿಗೆಯಾಗಿರುವುದು. (2) ನಾಗರಿಕತೆಯು ಧರ್ಮವಾಗಿರುವುದಿಲ್ಲ, ಅದಕ್ಕೆ ಪರ್ಯಾಯವೂ ಆಗಿರುವುದಿಲ್ಲ. ಕಾಯಿನನ ಸಂತತಿಯು ಕೆಳಗಿನ ಮೊದಲನೆಯ ಸಂಗತಿಗಳನ್ನು ನಮಗೆ ಕೊಡುತ್ತದೆ: ಕೊಲೆ, ಪಟ್ಟಣ, ಬಹುಪತ್ನಿತ್ವ, ವಾದ್ಯಗಾರ, ಲೋಹ - ಕಾರ್ಮಿಕ, ಪದ್ಯ; ಆದರೆ "ದೇವರೊಂದಿಗೆ ನಡೆದ" ಮನುಷ್ಯರ ಒಂದು ಉದಾಹರಣೆಯೂ ಇರುವದಿಲ್ಲ.

**7. ಸೇತನ ವಂಶಾವಳಿ** (ಆದಿಕಾಂಡ 5).-ಸೇತನ ನಂತರ ಆದಾಮನಿಗೆ ಇತರ ಗಂಡು ಮಕ್ಕಳು ಇದ್ದುದರ ಬಗ್ಗೆ ಸಂಶಯವಿಲ್ಲ, ಅವರಿಂದ ಇತರ ಸಂತತಿಗಳುಂಟಾದವು. ಇದು ಕಾಪಾಡಿ ಇಡಲ್ಪಟ್ಟಂತೆ ತೋರುತ್ತದೆ, ಯಾಕೆಂದರೆ ಇದು ನೋಹನ ಕಡೆಗೆ ನಡಿಸುತ್ತದೆ. ಅವನು ಅದರ ಒಳ್ಳೇ ಗುಣಲಕ್ಷಣಗಳನ್ನು ಪ್ರತಿನಿಧೀಕರಸುತ್ತದೆ ಮತ್ತು ಅವನ ಮುಖಾಂತರ ಕುಲವು ಶಾಶ್ವತಪಡಿಸಲ್ಪಟ್ಟಿತು ಹಾಗೂ ವಾಗ್ದತ್ತ ಸಂತತಿಯು ಬರಬೇಕಾಗಿತ್ತು. ವಂಶಾವಳಿಯು ಹತ್ತು ಹೆಸರುಗಳನ್ನು ಹೊಂದಿತ್ತು: ಆದಾಮ, ಸೇತ, ಎನೋಷ, ಕೇನಾನ, ಮಹಲೇಲ, ಯೆರೆದ, ಹನೋಕ, ಮೆತೂಷೆಲಹ, ಲೆಮೆಕ, ನೋಹ, ಮೊದಲನೋಟಕ್ಕೆ ಅದು ಜನನಗಳ ವಯಸ್ಸುಗಳ ಮತ್ತು ಮರಣಗಳ ಕುಟುಂಬ ದಾಖಲೆಯಂತೆ ಕಾಣುತ್ತದೆ. ಮತ್ತು ಏಕವಾಗಿ ಕಾಯಿನನ ವಂಶಜರಲ್ಲಿಯ ಹೆಸರುಗಳಂತೆ ತೋರುತ್ತದೆ, ಆದರೆ ಆ ವಂಶಾವಳಿಯೊಂದಿಗೆ ಸ್ವಲ್ಪ ಹೇಳಿದ್ದು ತೀಕ್ಷಣವಾಗಿ ವಿರೋಧಿಸುತ್ತದೆ, ಸೇತ್‌ನ ಮತ್ತು ಎನೋಷ್‌ನ ಕಾಲದಲ್ಲಿ, "ಜನರು ಕರ್ತನ ಹೆಸರನ್ನು ಹೇಳಿಕೊಳ್ಳುವುದಕ್ಕೆ ಪ್ರಾರಂಭಿಸಿದರು"[11]; "ಹನೋಕನು ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಳ್ಳುತ್ತಾ ಇರುವಾಗ ದೇವರು ಅವನನ್ನು ಕರೆದು ಕೊಂಡನು"[12]; ಒಂದು ಹೇಳಿಕೆಯು ದೈವಿಕ ಅನ್ಯೋನ್ಯತೆಯ ಮತ್ತು ಆಶೀರ್ವದಿಸಲ್ಪಟ್ಟ ಅಮರತ್ವದ ಮಹತ್ವವಾಗಿರುತ್ತದೆ. ನೋಹನು "ನೀತಿವಂತನಾಗಿದ್ದನು" ಮತ್ತು "ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಂಡನು."[13] ಹೀಗೆ ಅಲ್ಪವಾದ ದಾಖಲೆಗಳು ಇದ್ದರೂ, ಕಾಯಿನನ ಮತ್ತು ಸೇತನ ಎರಡು ವಂಶಾವಳಿಗಳ ಚಿತ್ರಣಗಳಲ್ಲಿ ವಿರೋಧತೆಯನ್ನು ತೋರಿಸುತ್ತವೆ.

**8. ಧರ್ಮಭ್ರಷ್ಟತೆ ಮತ್ತು ಜಲಪ್ರಳಯ** (ಆದಿಕಾಂಡ 6:1-8:14).-*a. ಜಲಪ್ರಳಯದ ಐತಿಹ್ಯಗಳು.*-ಈ ಅಧ್ಯಾಯಗಳು ಒಂದು ದೊಡ್ಡ ಐತಿಹಾಸಿಕ ಘಟನೆಯನ್ನು ವಿವರಿಸುತ್ತವೆ ಎಂಬುದರಲ್ಲಿ ಸಂಶಯವಿರುವುದಿಲ್ಲ. ನಾವು ನೋಡಿದಂತೆ ಏದೆನ್‌ದ

ಮತ್ತು ಪತನದ ಪ್ರತಿಧ್ವನಿಗಳು ಅನೇಕ ಪುರಾತನ ಸಾಹಿತ್ಯಗಳಲ್ಲಿ ಕಂಡುಬರುತ್ತವೆ, ಆದರೆ ಬೈಬಲ್ ಇತಿಹಾಸದ ಮೊದಲಿನ ಯಾವುದೇ ಇತರ ಘಟನೆಯು ಜಲಪ್ರಳಯದಂತೆ ಸಂಪೂರ್ಣವಾಗಿ ಸಮರ್ಥಿಸಲ್ಪಟ್ಟಿರುವುದಿಲ್ಲ. ಅದು ಆಳವಾದ, ಉಳಿದುಕೊಂಡಿರುವ ಪ್ರಭಾವವನ್ನು ಬಿಟ್ಟಿರುವುದು. ಅದರ ಸಾಂಪ್ರದಾಯಗಳು ನಾಲ್ಕು ದೊಡ್ಡ ಜನಾಂಗಗಳಲ್ಲಿ ತುರಾನಿಯನ್, ಹಾಮಿಟಿಕ್, ಸೆಮಿಟಿಕ್ ಮತ್ತು ಆರ್ಯನ್‌ರಲ್ಲಿ ಕಂಡುಬರುವವು. ಅವು ಬಹಳ ಭಿನ್ನವಾಗಿರುವವು: ಕೆಲವು ಬಹುದೇವತಾರಾಧಕರಿಂದ ಅತಿಯಾಗಿ ಕೆಡಿಸಲ್ಪಟ್ಟಿರುವವು; ಆದರೆ ನಾವೆಯು ನಿಂತುಕೊಂಡಿದ್ದ ಸ್ಥಳಕ್ಕೆ ಸಮೀಪದಲ್ಲಿದ್ದವರು ಅತಿ ಹೆಚ್ಚು ಆಳವಾದ ಮತ್ತು ಸರಿಯಾದ ವಿಚಾರಗಳನ್ನು ಕೊಟ್ಟಿದ್ದಾರೆ. ಚೈನಿಯರು, ಹಿಂದುಗಳು, ಖಲ್ದಿಯರು, ಐಗುಪ್ತ್ಯರು, ಗ್ರೀಕರು, ಸೆಲ್ಟರು, ಲ್ಯಾಪ್ಸರು ಎಸ್ಕಿಮೌಕ್ಟರು, ಮೆಕ್ಸಿಕನ್ನರು, ಮತ್ತು ಮಧ್ಯ ಹಾಗೂ ದಕ್ಷಿಣ ಅಮೇರಿಕನ್ನರು, ಎಲ್ಲರೂ ಪರಂಪರೆಯನ್ನು ಕಾಯ್ದಿಟ್ಟುಕೊಂಡಿದ್ದಾರೆ. ಕಲ್ದೀಯರ ಐತಿಹ್ಯವು ಅತೀ ಹೆಚ್ಚು ಪ್ರಸಿದ್ಧವಾಗಿದೆ, ಮತ್ತು ಬೈಬಲ್ ವಿವರಣೆಗೆ ಅತೀ ಹತ್ತಿರವಾಗಿದೆ. ಅದು ಎರಡು ರೂಪಗಳಲ್ಲಿ ಅಸ್ತಿತ್ವದಲ್ಲಿರುತ್ತದೆ: (1) ಕ್ರಿ.ಪೂ. 260ರಲ್ಲಿ ಗ್ರೀಕ್ ಭಾಷೆಯಲ್ಲಿ ಬರೆದ ಬಬಿಲೋನಿನ ಪ್ರೀಸ್ಟ್ ಬೆರೂಸಸ್‌ನದು, ಇದು ಅನೇಕ ಶತಮಾನಗಳಿಂದ ತಿಳಿಯಲ್ಪಟ್ಟಿದ್ದಾಗಿದೆ, (2) ಇಪ್ಪತ್ತೈದು ಶತಮಾನಗಳ ನಿದ್ರಿಸುವಿಕೆಯ ನಂತರ, 1872ರಲ್ಲಿ ನಿನೆವೆಯ ಅವಶೇಷಗಳಲ್ಲಿ ಅಗಿದು ತೆಗೆದ ಬೆಣೆಯಾಕಾರದ ಹಲಗೆಗಳಲ್ಲಿ ಇರುವಂಥದ್ದು.[14]

*b. ಜಲಪ್ರಳಯದ ನೈತಿಕ ಕಾರಣಗಳು.*-ಜಲಪ್ರಳಯವು ಕೇವಲ ಪ್ರಕೃತಿಗೆ ಸಂಬಂಧಿಸಿದ ನಾಶನವಾಗಿರುವುದಿಲ್ಲ. ಅದು ಮಹತ್ವದ ನೈತಿಕ ಘಟನೆಯಾಗಿದೆ. ಆದಿಕಾಂಡ 6:5 ಓದಿರಿ. ಸಮಾಜವು ನೈತಿಕವಾಗಿ ಕೊಳೆತು ಹೋಗಿ, ನಿರೀಕ್ಷೆಯಿಲ್ಲದ್ದಾಗಿತ್ತು. ಧರ್ಮಭ್ರಷ್ಟತೆಯ ಕಾರಣಗಳಿಗಾಗಿ ದೂರದಲ್ಲಿ ಹುಡುಕಾಡಬೇಕಾಗಿರಲಿಲ್ಲ. ಆದಿಕಾಂಡ 6:1-5 ಓದಿರಿ. ಕಾಯಿನ ಮತ್ತು ಸೇತ್‌ರ ಎರಡು ವಂಶಾವಳಿಗಳ ಬಗ್ಗೆ ಹೇಳಿದ್ದನ್ನು ಜ್ಞಾಪಿಸಿಕೊಳ್ಳಿರಿ. ಬಹುಶಃ ಅತಿಯಾಗಿ ಕೆಟ್ಟು ಹೋಗುವಿಕೆಗೆ ಕಾರಣವು ಸೇತ್‌ನ ವಂಶದವರು ("ದೇವರ ಪುತ್ರರು") ಕಾಯಿನನ ವಂಶದವರೊಂದಿಗೆ ("ಮನುಷ್ಯರ ಪುತ್ರಿಯರು") ಮದುವೆಯಾದದ್ದರ ಪರಿಣಾಮವಾಗಿತ್ತು.[15] ಕೆಡುಕನೊಂದಿಗೆ ಎಲ್ಲಾ ಒಪ್ಪಂದಗಳಲ್ಲಿಯಂತೆ, ಪರಿಣಾಮಗಳು ತಪ್ಪಾದ ಬದಿಯಲ್ಲಿರುತ್ತವೆ. ಧರ್ಮಭ್ರಷ್ಟತೆಯ ಪ್ರತಿಫಲವು ಜನಾಂಗದ ನಾಶನ. ಅತಿಶಯವಾದ ಅಪರಾಧವು ತೀಕ್ಷವಾದ ಶಿಕ್ಷೆಯನ್ನು ಕರೆಯುತ್ತದೆ. ಜೀವಾವಧಿ ಶಿಕ್ಷೆಗೆ ಗುರಿಪಡಿಸಲ್ಪಟ್ಟ ಕಠಿಣವಾದ ಅಪರಾಧಿಯನ್ನು ಸೆರೆಮನೆಗೆ ಹಾಕುತ್ತೇವೆ ಇಲ್ಲವೇ ಅವನು ಸಾಯುವವರೆಗೆ ನೇಣು ಹಾಕುತ್ತೇವೆ. ಜಲಪ್ರಳಯಕ್ಕಿಂತ ಮೊದಲಿನವರು ತಮ್ಮ ಅಪರಾಧಗಳಿಗಾಗಿ ಭೂಮಿಯಿಂದ ಕೊಚ್ಚಿಹೋದ ಕೊನೆಯ ಜನರಾಗಿರಲಿಲ್ಲ. ಜಲಪ್ರಳಯದ ನೀರು, ಎಂದೆಂದಿಗೂ ಸೊದೋಮವನ್ನು ನಾಶಪಡಿಸಿದ ಬೆಂಕಿಯ ಮಳೆ, ಅಂಟು ರೋಗದ ಉಸಿರು, ಯುದ್ಧದ ಬಿರುಗಾಳಿ ಇವು ನ್ಯಾಯತೀರ್ಪಿಕೆಯ ದೈವಿಕ ಸಂದೇಶವಾಹಕರಾಗಿವೆ.

*c. ಜಲಪ್ರಳಯದ ಸಾಧನಗಳು.*-ಭೂಮಿಯನ್ನು ಸೃಷ್ಟಿಸಿದಾತನು ಅದರ ನಾಶನಕ್ಕಾಗಿ ವಿಪುಲವಾದ ಸಾಧನೆಗಳನ್ನು ನಿಯಂತ್ರಿಸುತ್ತಾನೆ. ಪುನಃ ಪುನಃ ಮನುಷ್ಯನ ಯುಗದ ಮೊದಲು, ಮಳೆಯಿಂದ ವಿನಾಶವಾಗಿರಬಹುದು ಮತ್ತು ಸಮುದ್ರಗಳ ಕೆಳಗೆ ಮುಳುಗಿರಬಹುದು. ಭೂಮಿಯ ಕೆಳಗಿರುವ ಸಾಗರದ ಸೆಲೆಗಳು ಒಡೆದವು, ಮತ್ತು ಆಕಾಶದ ತೂಬುಗಳು ತೆರೆದವು (ಆದಿಕಾಂಡ 7:11). ಮನುಷ್ಯನು ಕಂಡುಬರುವುದಕ್ಕಿಂತ ಮೊದಲು ಬಹಳ ಸಲ ಸಂಭವಿಸಿದ್ದು, ಒಂದು ಮಹಾ ನೈತಿಕ

ಉದ್ದೇಶಕ್ಕಾಗಿ, ದೇವರು ನಡಿಸುವಿಕೆಯಲ್ಲಿ ಪುನಃ ಸುಲಭವಾಗಿ ಸಂಭವಿಸಬಹುದು. ಪಶ್ಚಿಮ ಏಶಿಯಾದ ಭಾಗಗಳು ಇನ್ನೂ ಸಮುದ್ರ ಪಾತಳಿಗಿಂದ ಕೆಳಗಿರುತ್ತವೆ, ಹಾಗೂ ಇತರ ಭಾಗಗಳ ಕುಸಿಯುವಿಕೆಯು ಪ್ರವಾಹದಿಂದ ತುಂಬಿಕೊಂಡು ಭೂಮಿಯಿಂದ ಸಾವಿರಾರು ಜನರನ್ನು ಕೊಚ್ಚಿಕೊಂಡು ಹೋಗುವುದು.

*d. ಜಲಪ್ರಳಯದ ಅವಧಿ ಮತ್ತು ವಿಸ್ತೀರ್ಣತೆ.*-ನಾಲ್ವತ್ತು ದಿನಗಳವರೆಗೆ ಮಳೆ ಸುರಿಯಿತು. ನೂರಐವತ್ತು ದಿನಗಳವರೆಗೆ ನೀರು ಮೇಲೇರುತ್ತ ಮುಂದುವರಿಯಿತು, ಮತ್ತು ತಗ್ಗಳು ಇನ್ನೂರ ಇಪ್ಪತ್ತೈದು ದಿನಗಳು ಬೇಕಾಯಿತು. ಅದು ವಿಶ್ವವ್ಯಾಪ್ತಿಯಾದದ್ದಾಗಿರ ಬಹುದು. ಇಲ್ಲವೇ ಹೆಚ್ಚು ಸಹಜವಾಗಿ ಜನಾಂಗದ ಚರಿತ್ರೆಯ ಮೊದಲಿನ ಸಮಯದಲ್ಲಿ ಜನರು ವಿಶಾಲವಾಗಿ ವ್ಯಾಪಿಸುವುದಕ್ಕಿಂತ ಮೊದಲು ಸಂಭವಿಸಿರಬಹುದು. ಯಾವುದೇ ದೃಷ್ಟಿಕೋನವು ವಿಶ್ವವ್ಯಾಪ್ತಿ ಸಾಂಪ್ರದಾಯಕ್ಕೆ ಒಪ್ಪಿಕೊಳ್ಳುತ್ತದೆ.

*e. ನೋಹ ಮತ್ತು ಜಲಪ್ರಳಯ.*-ಕೆಲವು ಹೆಸರುಗಳು ಯಾವಾಗಲೂ ದೊಡ್ಡ ಗಮನಾರ್ಹ ಘಟನೆಗಳೊಂದಿಗೆ ಸಂಬಂಧಿಸಿರುತ್ತವೆ. ಲಿಂಕನ್‌ನು ಬಂಧ ವಿಮೋ ಚನೆಯೊಂದಿಗೆ, ಕ್ರೊಮ್‌ವೆಲ್‌ನು ಕೊಮನ್‌ವೆಲ್ತ್‌ನೊಂದಿಗೆ, ಮೋಶೆಯ ಹೊರಡೋಣ ದೊಂದಿಗೆ; ಹಾಗೆಯೇ ನೋಹನು ಜಲಪ್ರಳಯದೊಂದಿಗೆ. ಓದಿರಿ ಆದಿಕಾಂಡ 6:9; 7:1; ಯೆಹೆಜ್ಕೇಲ 14:14 ನೋಹನು ದೇವರ ಮನುಷ್ಯನಾಗಿದ್ದನು, ಧರ್ಮಭ್ರಷ್ಠ ಯುಗದಲ್ಲಿ ನಾಯಕ ವ್ಯಕ್ತಿಯಾಗಿದ್ದನು. ವೇದಿಯ ನಂತರ ವೇದಿಯು ಬಿದ್ದುಹೋಯಿತು. ಆದರೆ ನೋಹನ ವೇದಿಯ ಬೆಂಕಿಯು ಜಲಪ್ರಳಯದಿಂದ ನಂದಿಸಲ್ಪಡುವವರೆಗೆ ಹೋಗಲಿಲ್ಲ. ಒಬ್ಬಂಟಿಗನಾಗಿ ನಿಲ್ಲುವ ಧೈರ್ಯಕ್ಕಾಗಿ ಕರೆಯುತ್ತದೆ, ಆದರೆ ನೋ ಹನು ಕೆಲವರು ಅನುಸರಿಸಲು ಧೈರ್ಯಪಡುವಲ್ಲಿ ನಡಿಸಲು ಧೈರ್ಯಗೊಂಡನು. ನೋಹನ ಪರಿಪೂರ್ಣ ವಿಧೇಯತೆ ಮತ್ತು ಸುರಕ್ಷಿತತೆ, ನಿರಾಶೆಯ ಕೆಟ್ಟುಹೋಗುವಿಕೆ ಮತ್ತು ಜನಾಂಗದ ನಾಶನ, ಇವು ಪ್ರಭಾವಶಾಲಿ ಪಾಠಗಳಾಗಿವೆ. ಒಂದನೂರ ಇಪ್ಪತ್ತು ವರ್ಷಗಳವರೆಗೆ ನೋಹನು ನಂಬಿಕೆಯಿಂದ *ಪ್ರಸಂಗಿಸಿದನು* ಮತ್ತು ಶೂರನಾಗಿ ಜೀವಿ ಸಿದನು. ಕೇವಲ ಏಳು ಜನ ಮಾರ್ಪಟ್ಟವರು ಅವನ ಶ್ರಮೆಯ ಬಹುಮಾನವನ್ನು ಹೊಂದಿದರು; ಅವನ ಹೆಂಡತಿ, ಅವನ ಗಂಡು ಮಕ್ಕಳು - ಶೇಮ್, ಹಾಮ್ ಮತ್ತು ಯೆಫೆತ, ಮತ್ತು ಅವನ ಹೆಂಡತಿಯರು. ಆದಾಗ್ಯೂ ನೋಹನು ಯಶಸ್ವಿಯಾಗಿದ್ದನು: ಅವನು *ತನ್ನ* ಕರ್ತವ್ಯ ಮಾಡಿದನು, ಮತ್ತು ಜಲಪ್ರಳಯವನ್ನು ದಾಟಿದನು.

---

ಟಿಪ್ಪಣೆಗಳು

[1]Dean had "wrought." [2]ಆದಿಕಾಂಡ 1:1. [3]ಆದಿಕಾಂಡ 1:2. [4]ಆದಿಕಾಂಡ 1:26. [5]ಆದಿಕಾಂಡ 2:16. [6]ಆದಿಕಾಂಡ 2:17. [7]ಆದಿಕಾಂಡ 3:1, 4. [8]ಆದಿಕಾಂಡ 3:8. [9]ನೋಡಲಿ Geikie's "Hours with the Bible," Vol. I, Chap. 8. [10]Delitzsch, quoted in Smith's O. T. Hist., p. 29.

[11]ಆದಿಕಾಂಡ 4:26. [12]ಆದಿಕಾಂಡ 5:24. [13]ಆದಿಕಾಂಡ 6:9. [14]ನೋಡಲಿ Geikie's "Hours with the Bible," Vol. I, Chap. 13. [15]ಆದಿಕಾಂಡ 6:2.

© 2009 Truth for Today